	ಗಂಡ, ಹೆಂಡತಿ, ಮಗ, ಮಗಳು, ತಂದೆ, ತಾಯಿ, ಸಹೋದರ, ಸಹೋದರಿ ಮೃತಪಟ್ಟ ಮಗನ ಹೆಂಡಿತ ಅಥವಾ ಮೃತಪಟ್ಟ ಮಗ ಅಥವಾ ಮಗಳ ಮಕ್ಕಳು ಎಂಬುದನ್ನು ಒಳಗೊಳ್ಳುತ್ತದೆ)	
48	ಈ ಉಪ ಕಂಡಿಕೆಯ ಉದ್ದೇಶಕ್ಕಾಗಿ ವ್ಯವಸ್ಥಾ ಕರ್ತನಿಗೆ ಸಂಬಂಧಿಸಿದಂತೆ 'ಕುಟುಂಬ' ಪದವು ಗಂಡ, ಹೆಂಡತಿ, ಮಗ, ಮಗಳು, ಸೊಸೆ, ಸಹೋದರರು, ಸಹೋದರಿಯರು ಮತ್ತು ಮೊಮ್ಮಕ್ಕಳನ್ನು ಒಳಗೊಳ್ಳುತ್ತದೆ.	ರೂ. 1,000/–

ಅನುಬಂಧ –7

ಕರ್ನಾಟಕ ವಿಧಾನ ಸಭೆ
ಹದಿಮೂರನೇ ವಿಧಾನಸಭೆ
ಎರಡನೇ ಅಧಿವೇಶನ
(ಮುಂದುವರೆದ ಉಪವೇಶನಗಳು)

ಕರ್ನಾಟಕ ಧನವಿನಿಯೋಗ (ಸಂಖ್ಯೆ. 1) ವಿಧೇಯಕ, 2009
(2009ರ ವಿಧಾನಸಭೆಯ ವಿಧೇಯಕ ಸಂಖ್ಯೆ. 25)

2008–09ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಕೆಲವು ಅಧಿಕ ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡಲು ಒಂದು ವಿಧೇಯಕ.

2008–09ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಆ ಪೈಕಿಯಿಂದ ಕೆಲವು ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡುವುದು ಯುಕ್ತವಾಗಿರುವುದರಿಂದ ;

ಇದು ಭಾರತ ಗಣರಾಜ್ಯದ ಅರವತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗಲಿ,

1. ಸಂಕ್ಷಿಪ್ತ ಹೆಸರು:– ಈ ಅಧಿನಿಯಮವನ್ನು ಕರ್ನಾಟಕ ಧನವಿನಿಯೋಗ (ಸಂಖ್ಯೆ. 1) ಅಧಿನಿಯಮ 2009 ಎಂದು ಕರೆಯತಕ್ಕದ್ದು.

2. ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ 2008–09ನೇ ಹಣಕಾಸು ವರ್ಷಕ್ಕಾಗಿ 620744.56 ಲಕ್ಷ ರೂಪಾಯಿಗಳ ನೀಡಿಕೆ:– ಅನುಸೂಚಿಯ 2ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ಸೇವೆಗಳ ಸಂಬಂಧದಲ್ಲಿ 2008–09ನೇ ಹಣಕಾಸು ಅವಧಿಯಲ್ಲಿ ಸಂದಾಯ ಮಾಡುವಾಗ ಒದಗಿ ಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ಅನುಸೂಚಿಯ 5ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾಗಿರುವ **ಆರು ಸಾವಿರದ ಇನ್ನೂರ**

ಏಳುಕೋಟಿ, ನಲವತ್ತನಾಲ್ಕು ಲಕ್ಷದ ಐವತ್ತಾರು ಸಾವಿರ ರೂಪಾಯಿಗಳಿಗೆ ಮೀರದಷ್ಟು ಮಾತ್ರ ಕರ್ನಾಟಕ ರಾಜ್ಯ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡತಕ್ಕದ್ದು ಮತ್ತು ಉಪಯೋಗಿಸತಕ್ಕದ್ದು.

3. **ಧನವಿನಿಯೋಗ:**– ಈ ಅಧಿನಿಯಮದ ಮೂಲಕ, ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡಲು ಮತ್ತು ಉಪಯೋಗಿಸಲು ಅಧಿಕಾರ ನೀಡಲಾದ ಮೊತ್ತಗಳನ್ನು ಸದರಿ ವರ್ಷಕ್ಕೆ ಸಂಬಂಧಪಟ್ಟಂತೆ ಅನುಸೂಚಿಯಲ್ಲಿ ತಿಳಿಸಲಾದ ಸೇವೆಗಳು ಮತ್ತು ಉದ್ದೇಶಗಳಿಗಾಗಿ ವಿನಿಯೋಗಿಸತಕ್ಕದ್ದು.

ಅನುಸೂಚಿ

(2 ಮತ್ತು 3ನೇ ಪ್ರಕರಣಗಳನ್ನು ನೋಡಿ)

(ರೂ. ಲಕ್ಷಗಳಲ್ಲಿ)

ಬೇಡಿಕೆ ಸಂಖ್ಯೆ	ಸೇವೆ ಮತ್ತು ಉದ್ದೇಶ		ಮೀರದ ಮೊಬಲಗು		ಒಟ್ಟು
			ವಿಧಾನಸಭೆಯಿಂದ ಪುರಸ್ಕೃತವಾದುದು	ಸಂಚಿತ ನಿಧಿಯಿಂದ ಪ್ರಭೃತವಾದುದು	
1	2		3	4	5
01	ಕೃಷಿ ಮತ್ತು ತೋಟಗಾರಿಕೆ	ರಾಜಸ್ವ	4439.81	----	4439.81
02	ಪಶುಸಂಗೋಪನೆ ಮತ್ತು ಮೀನುಗಾರಿಕೆ	ರಾಜಸ್ವ	1619.25	----	1619.25
03	ಆರ್ಥಿಕ	ರಾಜಸ್ವ	201545.00	----	201545.00
		ಬಂಡವಾಳ	22540.52		22540.52
04	ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ	ರಾಜಸ್ವ	2245.50	1685.53	3931.03
05	ಒಳಾಡಳಿತ ಮತ್ತು ಸಾರಿಗೆ	ರಾಜಸ್ವ	346.33	----	346.33
		ಬಂಡವಾಳ	500.00	----	5.00.00
07	ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್	ರಾಜಸ್ವ	8787.35	----	8787.35
		ಬಂಡವಾಳ	28602.25	----	28602.25
08	ಅರಣ್ಯ, ಜೀವಿಶಾಸ್ತ್ರ ಮತ್ತು	ರಾಜಸ್ವ	1188.28	--	1188.28
		ಬಂಡವಾಳ	50.00	----	50.00

	ಪರಿಸರ				
09	ಸಹಕಾರ	ರಾಜಸ್ವ	378.61	----	378.61
		ಬಂಡವಾಳ	1431.00	----	1431.00
10	ಸಮಾಜ ಕಲ್ಯಾಣ	ರಾಜಸ್ವ	2753.58	----	2753.58
11	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ	ರಾಜಸ್ವ	10008.94	----	10008.94
12	ವಾರ್ತಾ, ಪ್ರವಾಸೋದ್ಯಮ ಮತ್ತು ಯುವ ಜನ ಸೇವೆಗಳು	ರಾಜಸ್ವ	1769.80	----	1769.80
		ಬಂಡವಾಳ	3399.93	----	3399.93
13	ಆಹಾರ ಮತ್ತು ನಾಗರೀಕ ಸರಬರಾಜು	ರಾಜಸ್ವ	10188.50	----	10188.50
14	ಕಂದಾಯ	ರಾಜಸ್ವ	55034.41	----	55034.41
		ಬಂಡವಾಳ	600.00	----	600.00
17	ಶಿಕ್ಷಣ	ರಾಜಸ್ವ	12714.55	----	12714.55
		ಬಂಡವಾಳ	370.00	----	370.00
18	ವಾಣಿಜ್ಯ ಮತ್ತು ಕೈಗಾರಿಕೆ	ರಾಜಸ್ವ	5598.05	----	5598.05
		ಬಂಡವಾಳ	1307.15	----	1307.15
19	ನಗರಾಭಿವೃದ್ಧಿ	ರಾಜಸ್ವ	579.00	----	579.00
20	ಲೋಕೋಪಯೋಗಿ	ರಾಜಸ್ವ	13616.85	----	13616.85
		ಬಂಡವಾಳ	106727.56	----	106727.56
21	ಜಲಸಂಪನ್ಮೂಲ	ರಾಜಸ್ವ	269.56	----	269.56
		ಬಂಡವಾಳ	5668.00	----	5668.00
22	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು	ರಾಜಸ್ವ	666.44	----	666.44
		ಬಂಡವಾಳ	0.02	----	0.02
23	ಕಾರ್ಮಿಕ	ರಾಜಸ್ವ	1483.70	----	1483.70
		ಬಂಡವಾಳ	300.00	----	300.00
24	ಇಂಧನ	ರಾಜಸ್ವ	135.51	----	135.51
		ಬಂಡವಾಳ	100000.00	----	100000.00
25	ಕನ್ನಡ ಮತ್ತು ಸಂಸ್ಕೃತಿ	ರಾಜಸ್ವ	1353.72	----	1353.72
26	ಯೋಜನೆ,	ರಾಜಸ್ವ	10253.70	----	10253.70

	ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ				
27	ಕಾನೂನು	ರಾಜಸ್ವ	438.00	----	438.00
28	ಸಂಸದಿಯ ವ್ಯವಹಾರಗಳು ಮತ್ತು ಶಾಸನ ರಚನೆ	ರಾಜಸ್ವ	148.16	----	148.16
	ಒಟ್ಟು:	ರಾಜಸ್ವ	347562.60	1685.53	349248.13
		ಬಂಡವಾಳ	271496.43		271496.43
	ಒಟ್ಟು ಮೊತ್ತ:		619059.03	1685.53	620744.56

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

2008–2009ನೇ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ರಾಜ್ಯದ ಸಂಚಿತ ನಿಧಿಯೊಳಗಿನಿಂದ ವಿನಿಯೋಗಿಸಲು ಭಾರತ ಸಂವಿಧಾನದ 205ನೇ ಅನುಚ್ಛೇದದ ಉಪಬಂಧಗಳಿಗನುಸಾರವಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿಗಳು ಹಾಗೂ
ಹಣಕಾಸು ಸಚಿವರು

ಎಸ್.ಬಿ.ಪಾಟೀಲ್
ಕಾರ್ಯದರ್ಶಿ

<u>ಕರ್ನಾಟಕ ವಿಧಾನ ಸಭೆ</u>

14 ಶ್ರೀ. ವೈ.ಎನ್.ರುದ್ರೇಶ ಗೌಡ
ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು

ಅ) ಹಾಸನ ಜಿಲ್ಲೆಯಲ್ಲಿ ಆಲೂಗಡ್ಡೆ ಬೆಳೆಯು ರೋಗದಿಂದ ಹಾನಿಯಾಗಿರುವುದು ನಿಜವೇ;

ಹೌದು

ಆ) ಹಾಗಿದ್ದಲ್ಲಿ, ಹಾನಿಯಾಗಿರುವ ಪ್ರದೇಶವೆಷ್ಟು;

55,565 ಹೆಕ್ಟೇರ್

ಇ) ಹಾಗಿದ್ದಲ್ಲಿ, ಯಾವ ರೋಗದಿಂದ ಬೆಳೆ ಹಾನಿಯಾಗಿರುತ್ತದೆ

ಕೊನೆಯ ಅಂಗಮಾರಿ ರೋಗ